ರುಗೆ ಯೋಚನೆ ಏರಿಯಾದಲ್ಲಿರತಕ್ಕ ಜಮೀನನ್ನು ಜಮೀನು ಇಲ್ಲದೇ ಇರುವವರಿಗೂ ಮತ್ತು ಹರಿಜನರಿಗೂ 30 ಪರ್ಸೆಂಟ್ ಜಮೀನನ್ನು ಕೊಟ್ಟು ಇನ್ನು ಉಳಿದ 70 ಪರ್ಸೆಂಟ್ ಜಮೀನನ್ನು ಮುಳುಗಡೆಯಾದ ರೈತರಿಗೆ ಕೊಡುವುದಕ್ಕೆ ಸರ್ಕಾರ ನಿರ್ಣಯ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಭದ್ರಾವತಿ ಮತ್ತು ತರೀಕೆರೆ ಮುಂತಾದ ಪ್ರದೇಶದಲ್ಲಿರುವ ಯೋಜನೆಯಿಂದ ಮುಳುಗಡೆಯಾಗತಕ್ಕ ಪ್ರದೇಶದಲ್ಲಿನ ಜನರ ಪುನರ್ವಸತಿಗಾಗಿ ಜಮೀನು ಕೊಡುವುದಕ್ಕೆ ಒಂದು ಪರ್ಸೆಂಟೇಜ್ ನಿಗದಿ ಮಾಡುತ್ತೇವೆ. ಮತ್ತು ಲೋಕಲ್ ಏರಿಯಾದಲ್ಲಿರತಕ್ಕ ಜಮೀನು ಇಲ್ಲದೇ ಇರತಕ್ಕವರಿಗೆ ಜಮೀನು ಹಂಚುವುದಕ್ಕೆ ಒಂದು ಪರ್ಸೆಂಟೇಜ್ ನಿಗದಿಮಾಡಿ ಆ ಪ್ರಕಾರ ಅವರಿಗೆ ಜಮೀನು ಹಂಚುತ್ತೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಹೇಮಾವತಿ ಯೋಜನೆಯಿಂದ ಮುಳುಗಡೆಯಾಗುವ ಪ್ರದೇಶಗಳಲ್ಲಿನ ರೈತರಿಗೆ ಪುನರ್ವಸತಿ ನಿರ್ಮಾಣ ಮಾಡುವ ಸಲುವಾಗಿ ಬೆಲ್ಲಾಮೆ, ದಾಸನ ಕೆನ್ನೂರು ಮತ್ತು ಎಡಾಪುರದಲ್ಲಿರತಕ್ಕ ಕಾವಲುಗಳನ್ನು ರಿಲೀಜ್ ಮಾಡುವುದಕ್ಕೆ ಸರ್ಕಾರದವರು ಆಲೋಚನೆ ಮಾಡಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಾವಲುಗಳನ್ನು ಇದುವರೆಗೆ ರಿಲೀಜ್ ಮಾಡಿಲ್ಲ. ಈಗ ಯೋಜನೆಗಳಲ್ಲಿ ಮುಳುಗಡೆಯಾಗುವ ರೈತರಿಗೆ ಜಮೀನು ಕೊಡುವುದಕ್ಕೆ ಕೆಲವು ಕಾವಲುಗಳನ್ನು ರೀಲೀಸ್ ಮಾಡುವ ಯೋಜನೆ ಮಾಡುತ್ತೇವೆ.

Development of Inland Fisheries.

*Q.—311. Sri B. BYRAPPAJI (Turuvekere).—

Will the Government be pleased to state :—

(*a*) what is the amount spent for the development of Inland Fisheries in the State from last three years and the area found to be suitable for fish culture ;

(*b*) what is the amount spent for development of Marine Fisheries in the State from last three years and the area found to be suitable for fish culture ;

(*c*) what are the steps taken by the Government towards fish seed production ;

(*d*) whether they are aware that proper steps are not taken to improve the inland fish culture in the State ?

A.—Sri B. RACHAIAH (Minister for Forest and Fisheries).—

(*a*) 1962-63 ... Rs. 3.09 lakhs
1963-64 ... Rs. 6.84 lakhs
1964-65 ... Rs. 6.07 lakhs

Suitable areas are being surveyed.

(*b*) 1962-63 ... Rs. 34.51 lakhs
1963-64 ... Rs. 34.62 lakhs
1964-65 ... Rs. 34.25 lakhs

No fish culture is done in the Sea.

(*c*) Nurseries and rearing farms have been established.

(*d*) No.

ಶ್ರೀ ಬಿ. ಬೈರಪ್ಪಾಜಿ.—ಇನ್‌ಲೆಂಡ್ ಫಿಷರೀಸ್‌ಗಾಗಿ ಮೂರು ವರ್ಷದಿಂದ ಖರ್ಚು ಮಾಡಿರುವುದಕ್ಕೂ ಸೀ ಕೊಸ್ಟಿನಲ್ಲಿ ಖರ್ಚು ಮಾಡಿರುವುದಕ್ಕೂ ಅಂತರ ಬಹಳ ಇದೆ. ಇನ್‌ಲೆಂಡ್ ಫಿಷರೀಸ್‌ಗಾಗಿ ಕೆಲಸ ಮಾಡಿರತಕ್ಕ ಜನರ ಸಂಖ್ಯೆ ಎಷ್ಟು? ಮತ್ತು ಮೆರೀನ್ ಫಿಷರೀಸ್‌ಗಳಿಗಾಗಿ ಕೆಲಸ ಮಾಡಿರತಕ್ಕ ಜನರ ಸಂಖ್ಯೆ ಎಷ್ಟು?

†ಶ್ರೀ ಬಿ. ರಾಚಯ್ಯ.—ಒಳನಾಡು ಮೀನುಗಾರಿಕೆಗಾಗಿ ಕೆಲಸ ಮಾಡುತ್ತಿರುವ ಜನರು ಸುಮಾರು ಆರು ಲಕ್ಷದಷ್ಟು ಇದ್ದಾರೆ. ಎರಡು ಜಿಲ್ಲೆಗಳಲ್ಲಿ ಸಮುದ್ರ ತೀರದ ಕಾವಳಿ ಪ್ರದೇಶದಲ್ಲಿ ಮೀನನ್ನು ಅವಲಂಬಿಸಿರತಕ್ಕ ಜನರು ಸುಮಾರು ಎರಡು ಲಕ್ಷದಷ್ಟು ಇದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—ಎರಡು ಲಕ್ಷ ಜನರಿರತಕ್ಕ ಪ್ರದೇಶಗಳಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ಖರ್ಚು ಮಾಡುತ್ತಿದ್ದೀರಿ. ಆದರೆ ಆರು ಲಕ್ಷ ಜನರಿರತಕ್ಕ 17 ಜಿಲ್ಲೆಗಳಲ್ಲಿ ಕೇವಲ ಹದಿನೈದು ಲಕ್ಷ ಚಿಲ್ಲರೆ ಖರ್ಚು ಮಾಡುತ್ತಿದ್ದೀರಿ. ಇದಕ್ಕೆ ಕಾರಣವೇನು? ಮತ್ತು ಇನ್‌ಲೆಂಡ್ ಫೀಷರೀಸ್‌ಗಾಗಿ ಸತಕಾವದವರು 17 ಜಿಲ್ಲೆಗಳಲ್ಲಿ ಸಾಕಷ್ಟು ವ್ಯವಸ್ಥಿತವಾಗಿ ಹೆಚ್ಚು ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಬಿ. ರಾಚಯ್ಯ.—ಒಳನಾಡಿನಲ್ಲಿರತಕ್ಕ ಸುಮಾರು ನಾಲ್ಕು ಲಕ್ಷ ಎಕರೆಗಳಲ್ಲಿ ಮೀನಿನ ಸಾಕಾಣಿಕೆ ಮಾಡಬೇಕು ಎಂದು ಇದ್ದರೂ ಅನೇಕ ಕಡೆಗಳಲ್ಲಿರುವ ಕೆರೆಗಳಲ್ಲಿ ನೀರೇ ಇರುವುದಿಲ್ಲ, ಬತ್ತಿ ಹೋಗುತ್ತದೆ. ಅದರಲ್ಲೂ ಈ ವರ್ಷದಂತೆ ಮಳೆಯೇ ಬಾರದೇ ಹೋದರೆ ಕೆರೆಗಳಲ್ಲಿ ನೀರೇ ಇರುವುದಿಲ್ಲ. ಅವಕ್ಕೋಸ್ಕರ ನಾವು ಎಷ್ಟು ಮೀನನ್ನು ಸಾಕಬೇಕು ಎಂದಿದ್ದರೂ ಪ್ರಕೃತಿಯು ನಮ್ಮ ಮೇಲೆ ಹೆಚ್ಚು ಅನುಗ್ರಹ ಮಾಡಬೇಕು. ಅವಾಗದೇ ಇದ್ದುದರಿಂದ ನಾವು ಎಷ್ಟು ಹಣ ಖರ್ಚು ಮಾಡಿದೇಕೋ ಅಷ್ಟನ್ನೂ ಮಾಡಲು ಸಾಧ್ಯವಾಗಲಿಲ್ಲ. ಎರಡನೆಯದಾಗಿ ಒಳನಾಡಿನಲ್ಲಿ ಮೀನುಗಳನ್ನು ಹೆಚ್ಚಾಗಿ ಸಾಕಬೇಕೆಂದು ಯೋಜನೆಗಳನ್ನೂ ಹಾಕಕೊಂಡಿದ್ದೇವೆ. ಕೆಲವು ಕಡೆ ನಾಲ್ಕು ನರ್ಸರಿಗಳನ್ನು ಮಾಡಲಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ನೀರಸಾಗರ, ಶಾಂತಿ ಸಾಗರ, ಕೃಷ್ಣರಾಜ ಸಾಗರ ಹಾಗೂ ಭದ್ರಾ ಇಲ್ಲಿ ನರ್ಸರಿಗಳನ್ನು ಮಾಡಲು ಮಂಜೂರಾತಿ ಕೊಡಲಾಗಿದೆ. ಇದನ್ನು ಕ್ಯಾಷ್‌ಪ್ರೋಗ್ರಾಂ ಪ್ರಕಾರ ಮಾಡಬೇಕೆಂದು ಇದೆ. ಇದರ ಬಗ್ಗೆ ಈಗಾಗಲೇ ತಕ್ಕ ಕಾರ್ಯಕ್ರಮ ತೆಗೆದು ಕೊಳ್ಳುತ್ತಿದ್ದೇವೆ.

ಶ್ರೀ ಸಿದ್ದಯ್ಯ ಕಾಶೀಮಠ.—ಈ ನರ್ಸರಿಗಳನ್ನು ಎಲ್ಲೆಲ್ಲಿ ಸ್ಥಾಪನೆ ಮಾಡಬೇಕೆಂದು ಏರ್ಪಾಡು ಮಾಡಲಾಗಿದೆ?

ಶ್ರೀ ಬಿ. ರಾಚಯ್ಯ.—ಮೊದಲೇ ಹೇಳಿದ ಹಾಗೆ ನಾಲ್ಕು ಕಡೆಗಳಲ್ಲಿ ಹೊಸದಾಗಿ ನರ್ಸರಿಗಳನ್ನು ಮಾಡಬೇಕೆಂದು ಇದೆ.

Sri SANJEEVANATH AIKALA.—Can the Minister give the break up in relation to inland fisheries farms in respect of South Kanara district?

Sri B. RACHAIAH.—There is no need for spending on inland fisheries in South Kanara and North Kanara.

ಶ್ರೀ ಜಿ. ಎ. ಗೌಡ.—ಇದರ ಪರಿಣಾಮವಾಗಿ ಎಷ್ಟು ಮೀನನ್ನು ಉತ್ಪಾದನೆ ಮಾಡಿ ಎಷ್ಟು ಫಾರಿನ್ ಎಕ್ಸ್‌ಚೇಂಜ್‌ನ್ನು ಪಡೆಯಲು ಆನ ಕೂಲವಾಯಿತು?

ಶ್ರೀ ಬಿ. ರಾಚಯ್ಯ.—ಸುಮಾರು ಒಂದೂವರೆ ಲಕ್ಷ ಟನ್ನುಗಳಷ್ಟು ಮೀನು ಉತ್ಪಾದನೆ ಎರಡು ಜಿಲ್ಲೆಗಳಿಂದ ಬಂದಿತು ಮತ್ತು 25 ಲಕ್ಷ ರೂಪಾಯಿಗಳಷ್ಟು ಫಾರಿನ್ ಎಕ್ಸ್‌ಚೇಂಜ್ ನಮಗೆ ದೊರೆತಿದೆ. ಸಾಧಾರಣವಾಗಿ ಮೀನಿನ ಮಾರಿಗೆಗಳನ್ನು ಕೇಳಿದವರಿಗೆಲ್ಲಾ ಒದಗಿಸುತ್ತಿದ್ದೇವೆ. ಮತ್ತು ಒಳನಾಡಿನಿಂದ ಮೀನುಗಳನ್ನು ತರಿಸಿ ಸುಮಾರು 5645 ಕೆ. ಜಿ. ಯಷ್ಟು ಮೀನನ್ನು ಸಪ್ಲೈ ಮಾಡಲಾಗಿದೆ.

ಶ್ರೀ ಜಿ. ದುಗ್ಗಪ್ಪ.—ಕೃಷ್ಣರಾಜ ಸಾಗರ ಹಾಗೂ ಇತರ ದೊಡ್ಡ ದೊಡ್ಡ ಸಾಗರಗಳ ಕೆಳಗೆ ನರ್ಸರಿಗಳನ್ನು ಮಾಡಲಾಗಿದೆ ಎಂದು ಹೇಳಿದಿರಿ. ಚಿತ್ರದುರ್ಗ ಜಿಲ್ಲೆಯಲ್ಲಿ ವಾಣೀವಿಲಾಸ ಸಾಗರ ಇದೆ, ಗಾಯತ್ರೀ ರಿಸರ್ವಾಯರ್ ಇದೆ. ಇಂತಹ ಕಡೆಗಳಲ್ಲೂ ನರ್ಸರಿಯನ್ನು ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆಯೇ?

ಶ್ರೀ ಬಿ. ರಾಚಯ್ಯ.—ವಾಣೀವಿಲಾಸ ಸಾಗರದಲ್ಲಿ ನರ್ಸರಿ ಮಾಡಿ ಈಗಾಗಲೇ ಅದರ ಕೆಲಸ ಪೂರ್ತಿಯಾಗುತ್ತಾ ಬಂದಿದೆ. ಇನ್ನೂ ಇತರ 17 ಜಿಲ್ಲೆಗಳಲ್ಲಿ ರಿಸರ್ವಾಯರುಗಳು ಇರುವ ಕಡೆಗಳಲ್ಲಿ ಫಿಷಿಂಗ್ ನರ್ಸರಿಗಳನ್ನು ಸ್ಥಾಪನೆ ಮಾಡಬೇಕೆಂದು ಯೋಜನೆ ಇಟ್ಟುಕೊಳ್ಳಲಾಗಿದೆ.

Sri C. J. MUCKANNAPPA.—May I know the various steps that Government have taken to improve this inland fisheries ?

Sri B. RACHAIAH.—I have already mentioned that in Bhadra and Hessarghatta, we have started farms to rear this and supply them to the various inland tanks.

Mr. SPEAKER.—At Tungabhadra, formerly we were importing from Bengal and Ganges the scarp and fingerlings in lakhs. To-day we are not importing at all. We are, on the other hand exporting to other States and making a profit of 30 lakhs. Why not the Minister take some of the Members there and show them.

ಶ್ರೀ ಬಿ. ಬೈರಪ್ಪಾಜಿ.—ಇನ್‌ಲೆಂಡ್ ಫಿಷರೀಸ್‌ನ್ನು ಉತ್ತಮಪಡಿಸಬೇಕು ಮತ್ತು ಇದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು. ನಮ್ಮಲ್ಲಿರುವ 17 ಜಿಲ್ಲೆಗಳಲ್ಲಿ ಸುಮಾರು 2700 ಮೇಜರ್, ಚ್ಯಾಂಕುಗಳಿವೆ ಮತ್ತು ಮೂವತ್ತು ಸಾವಿರಕ್ಕೆ ಮೇಲ್ಪಟ್ಟು ಚಿಕ್ಕ ಚಿಕ್ಕ ಕೆರೆಗಳು ಇವೆ ಮತ್ತು ಮೂರು ಸಾವಿರ ಮೈಲಿ ಉದ್ದದ ನದಿಗಳು ಇವೆ. ಇಷ್ಟೆಲ್ಲಾ ಇದ್ದರೂ ಈಗಿನ ಅಭಾವದ ಪರಿಸ್ಥಿತಿಯಲ್ಲಿ ಆಹಾರದ ಕೊರತೆಯನ್ನು ತುಂಬಲು ಮೀನಿನ ಉತ್ಪಾದನೆಯನ್ನು ಇನ್ನೂ ಪರಿಣಾಮಕಾರಿಯಾಗಿ ಮಾಡಲು ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಬಿ. ರಾಚಯ್ಯ.—ಈಗಾಗಲೇ ಪರಿಣಾಮಕಾರಿಯಾದ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳಲಾಗಿದೆ. ಮೀನಿನ ಮರಿಗಳನ್ನು ಯಾರು ಬೇಕೆಂದರೂ ಅವರಿಗೆ ಕೊಡುತ್ತಿದ್ದೇವೆ. ಅಯಾ ತಾಲ್ಲೂಕು ಬೋರ್ಡ್‌ಗಳ ಹಾಗೂ ಪಂಚಾಯತಿಗಳ ಮೂಲಕ ಮೀನುಗಳ ಮರಿ ಬೇಕೆಂದು ಕೇಳಿ ದಾಗ ಅವರಿಗೆಲ್ಲಾ ಮೀನನ್ನು ಒದಗಿಸಲಾಗಿದೆ ಮತ್ತು ಇಂತಹ ಕಡೆಗಳಿಗೆ ಬೆಲೆಯನ್ನು ಕಡಿಮೆ ಮಾಡಿ ಸಹ್ಲೆತ್ತೆ ಮಾಡಲಾಗಿದೆ.

Sri K. LAKKAPPA.—Is there any scheme to provide loans to individuals regarding development of inland fisheries ?

Sri B. RACHAIAH.—Fishermen Co-operative Societies have been organised and we are helping them by way of loans.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ತಾವು ಸಾಕುತ್ತಿರುವ ಮೀನುಗಳ ಮರಿಗಳು ಬಹು ಪ್ರಾಮುಖ್ಯವಾಗಿರುವುದರಿಂದ ಅವು ಪರಾರಿಯಾಗದೇ ಇರಲು ತಕ್ಕ ಬಂದೊಬಸ್ತನ್ನು ಮಾಡಿದ್ದೀರಾ?

ಶ್ರೀ ಬಿ. ರಾಚಯ್ಯ.—ಕೆಲವು ಸಲ ಅವನ್ನು ನೀರು ನಾಯಿಗಳು ತಿಂದುಬಿಡುತ್ತವೆ. ಇದರ ಕ್ಷಣ ಬಗ್ಗೆಯೂ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಅಲ್ಲದೆ ಕದ್ದು ಮೀನನ್ನು ಹಿಡಿ ಯುತ್ತಿರುವವರನ್ನು ಹಿಡಿಯಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ.

Smt. VIJAYA RAGHAVENDRA RAO.—In the development of marine fisheries, what is the amount spent for North Kanara District and the amount spent for South Kanara District ?

Sri B. RACHAIAH.—Sir, it requires some time to calculate and I cannot give the figure just now.

1-30 P. M.

ಶ್ರೀ ಎಸ್. ಗೋಪಾಲಗೌಡ.—ಶಿವಮೊಗ್ಗ ಜಿಲ್ಲೆಯಲ್ಲಿ 8 ಸಾವಿರ ಕೆರೆಗಳಿವೆ, ತುಂಗ ಮತ್ತು ಲಿಂಗನಮಕ್ಕಿ ಜಲಾಶಯಗಳಿವೆ, ಶಾಂತಿಸಾಗರವಲ್ಲಿ ಮತ್ತು ಇತರ ಕಡೆಗಳಲ್ಲಿ ಇದುವರೆಗೆ ಮೀನಿನ ಅಭಿವೃದ್ಧಿಗೆ ಅವಕಾಶವಾಗಿಲ್ಲ ಆದುದರಿಂದ ಶಿವಮೊಗ್ಗ ಜಿಲ್ಲೆಗೇ ಒಂದು ಪ್ರತ್ಯೇಕವಾದ ಮೀನು ಗಾರಿಕೆ ವಿಭಾಗವನ್ನು ಪ್ರಾರಂಭಿಸುವುದಕ್ಕೆ ಸರಕಾರ ಯೋಚನೆ ಮಾಡುತ್ತದೆಯೇ?

ಶ್ರೀ ಬಿ. ರಾಚಯ್ಯ.—ಯೋಚನೆ ಮಾಡುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.—ಇನ್‌ಲೆಂಡ್ ಫಿಷರೀಸ್ ಬಹಳ ಅತ್ಯುತ್ತಮವಾದುದು. ಆದುದರಿಂದ ಮೆರೈನ್ ಫಿಷರೀಸ್‌ಗೆ ಗಮನ ಕೊಡುವಂತೆ ಇನ್‌ಲೆಂಡ್ ಫಿಷರೀಸ್ ಅಭಿವೃದ್ಧಿಗೂ ಕೂಡ ಗಮನ

(ಶ್ರೀ ಬಿ. ಶ್ಯಕರಪ್ಪಾಜಿ)

ಕೊಡಬೇಕು. ಇವತ್ಕಾಗಿ ಕ್ರಾಷ್ ಪ್ರೋಗ್ರಾಂ ಪ್ರಾರಂಭಿಸಬೇಕೆಂಬ ಉದ್ದೇಶದಿಂದಲೇ ಈ ಪ್ರಶ್ನೆ ತಂದಿರುವುದರಿಂದ ಆ ಬಗ್ಗೆ ಏನು ಮಾಡುತ್ತೀರಿ?

ಶ್ರೀ ಬಿ. ರಾಚಯ್ಯ.—ಈ ದಿವಸ ಉತ್ತರ ಕನ್ನಡವು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸುಮಾರು 10 ಸಾವಿರ ಚದರ ಮೈಲಿ ಪ್ರದೇಶದಲ್ಲಿ ಮಾನಿಟರಿಂಗ್‌ನ್ನು ಹಿಡಿಯಬಾಗುತ್ತಿದೆ. ಹೊಸದಾಗಿ ವ್ಯವಸ್ಥೆ ಮಾಡಬೇಕಾದರೆ ಕಾರ್ಯಾವಕಾಶ ಬೇಕಾಗುತ್ತದೆ. ಕೇಂದ್ರ ಸರಕಾರದವರು ಎಷ್ಟು ಬೇಗ ಆಹಾರ ವನ್ನೊದಗಿಸಲು ಸಾಧ್ಯವೋ ಅಷ್ಟು ಬೇಗ ಒದಗಿಸಲು ಸಾಧ್ಯವಾಗುವಂಥ ಯೋಜನೆಗಳಿಗೆ ಅಧ್ಯತೆ ಕೊಡಬೇಕೆಂದು ತಿಳಿಸಿದ್ದಾರೆ. ಆದುದರಿಂದ ಹೊಸದಾಗಿ ಯೋಜನೆ ಮಾಡಲು ಸಾಧ್ಯವಾಗಿಲ್ಲ. ಹಾಗೆ ಮಾಡಬೇಕಾದರೆ ಹೆಚ್ಚು ಹಣ ಬೇಕಾಗುತ್ತದೆ, ಅದನ್ನೊದಗಿಸಲು ಸಾಧ್ಯವಾಗಿಲ್ಲ.

Cases of Cruelty to Animals

*Q.—317 **Sri P. F. D'MELLOW** (Nominated).—

Will the Government be pleased to state :—

(*a*) the number of cases of cruelty to animals for which prosecutions have been launched in the courts in Bangalore District (Urban) during 1963-64 and 1965 and the number of convitions obtained ;

(*b*) the number of complaints received from voluntary animal welfare agencies in the Bangalore Urban District and the number of prosecutions launched by or on behalf of these agencies during the years 1963-64 and 1965 ;

(*c*) the number of convictions obtained as the result of such prosecutions?

*A.—**Sri M. V. KRISHNAPPA** (Minister for Revenue).—

	Year	*Prosecutions launched :*	*Convictions obtained :*
(*a*)	1963	Information not available	
	1964	293	293
	1965	300	300

		No. of complaints recd.	*No of prosecutions launched.*
(*b*)	1963	Information not available	
	1964	4080	293
	1965	3,101	300

(*c*) *Vide* reply to clause (*a*).

Sri P. F. D' MELLOW.—May I know the explanation for the great difference between the number of complaints made and the number of prosecutions actually launched ?